ಆ) ಸದ್ಯಕ್ಕೆ ಇಲ್ಲ.

ಪ್ರಶ್ನೆ : ೪೫೫ (ಮಾನ್ಯ ಸದಸ್ಯರು ಹಾಜರಿಲ್ಲ)

ಶ್ರೀ ಜಿ. ರಾಮದಾಸ್.—ಸೊಡರನಾಳು ಗ್ರಾಮಕ್ಕೆ ಯಾವಾಗ ಪಶುವೈದ್ಯ ಶಾಲೆಯನ್ನು ಮಂಜೂರು ಮಾಡಿಸಿಕೊಡುತ್ತೀರಿ ?

ಶ್ರೀ ಸಿದ್ಧರಾಮಯ್ಯ.—ಈಗಾಗಲೇ ಹೊಸದಂರ್ಗ ತಾಲ್ಲೂಕ್‌ನಲ್ಲಿ ೯ ಪಶುವೈದ್ಯ ಶಾಲೆಗಳು ಇವೆ. ಒನೆಯ ಪಂಚವಾರ್ಷಿಕ ಯೋಜನೆಯಲ್ಲಿ ಈ ತಾಲ್ಲೂಕ್‌ನಲ್ಲಿ ಇನ್ನೂ ೩ ಪಶುವೈದ್ಯ ಶಾಲೆಗಳನ್ನು ತೆರೆಯಬೇಕೆಂಬ ಯೋಚನೆ ಇದೆ. ಸೊಡರನಾಳು ಗ್ರಾಮದ ಪಕ್ಕದ ಗ್ರಾಮದಲ್ಲಿ ಮತ್ತು ಹೊಸದಂರ್ಗದಲ್ಲಿ ಪಶುವೈದ್ಯ ಶಾಲೆಗಳು ಇರುವುದರಿಂದ ಈ ಗ್ರಾಮದಲ್ಲಿ ಮಂತ್ರೊಂದೂ ಪಶುವೈದ್ಯಶಾಲೆಯನ್ನು ಸಧ್ಯಕ್ಕೆ ತೆರೆಯಬೇಕೆಂಬ ಉದ್ದೇಶ ಇಲ್ಲ. ಈ ಭಾಗದಲ್ಲಿ ಸಂಪರ್ಕ ವ್ಯವಸ್ಥೆ ಚೆನ್ನಾಗಿದ್ದರೆ ಸಂಚಾರಿ ಪಶುವೈದ್ಯ ಶಾಲೆಯ ಮೂಲಕ ಈ ಗ್ರಾಮಕ್ಕೆ ಎಲ್ಲಾ ರೀತಿಯ ಪಶು ವೈದ್ಯಕೀಯ ಸವಲತ್ತುಗಳನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಜಿ. ರಾಮದಾಸ್.—ಈ ಮೊದಲು ಈ ಗ್ರಾಮಕ್ಕೆ ಸಂಚಾರಿ ಪಶುವೈದ್ಯ ಶಾಲೆಯಾ ಅನುಕೂಲ ಸಿಗುತ್ತಿತ್ತು. ಈಗ ನಿಂತು ಹೋಗಿದೆ. ಮತ್ತೆ ಈ ಒಂದು ವ್ಯವಸ್ಥೆಯನ್ನು ಮಾಡಿದರೆ ಅಲ್ಲಿನ ಜಾನುವಾರುಗಳಿಗೆ ಅನುಕೂಲವಾಗುತ್ತದೆ.

ಶ್ರೀ ಸಿದ್ಧರಾಮಯ್ಯ.—ಅಲ್ಲಿಗೆ ಸಂಚಾರಿ ವಾಹನವನ್ನು ಕಳುಹಿಸಿಕೊಡಲು ನಾನು ವ್ಯವಸ್ಥೆ ಮಾಡುತ್ತೇನೆ.

ತಾಂತ್ರಿಕ ಇಲಾಖೆಯ ಉಪನ್ಯಾಸಕರುಗಳೂ ಹಾಗೂ ವಿಭಾಗದ ಮುಖ್ಯಾಧಿಕಾರಿಗಳನ್ನು ಎರಡು ವರ್ಷಗಳಿಗಿಂತ ಕಡಿಮೆ ಸೇವೆ ಸಲ್ಲಿಸಿರುವವರನ್ನು ವರ್ಗಾವಣೆ ಮಾಡಿರುವುದು.

೧೦೬. ಶ್ರೀ ಗೋಪಾಲ ಮುಕುಂದ ಕಾನಡೆ ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ. —

ಅ) ಒಂದೇ ಸ್ಥಳದಲ್ಲಿ ಎರಡು ವರ್ಷಗಳಿಗೂ ಕಡಿಮೆ ಅವಧಿಯವರೆಗೆ ಸೇವೆ ಸಲ್ಲಿಸಿದ್ದ ಎಷ್ಟು ಮಂದಿ ತಾಂತ್ರಿಕ ಇಲಾಖೆಯ ಉಪನ್ಯಾಸಕರುಗಳು, ವಿಭಾಗದ ಮುಖ್ಯಾಧಿಕಾರಿಗಳ, ಪ್ರಾಚಾರ್ಯರುಗಳ ಮುಂತಾದವರುಗಳ ವರ್ಗಾವಣೆ ಮಾಡಲಾಗಿದೆ (ಮೇಲ್ಕಂಡ ಅಧಿಕಾರಿಯ ಹೆಸರು, ಹುದ್ದೆ ಮುಂತಾದ ವಿವರಗಳನ್ನು ನೀಡುವುದು) ;

ಆ) ಈ ರೀತಿ ಅವಧಿ ಪೂರ್ವ ವರ್ಗಾವಣೆಗೆ ಕಾರಣಗಳೇನು ;

ಇ) ಇಂತಹ ಅವಧಿ ಪೂರ್ವ ವರ್ಗಾವಣೆಯಿಂದ ನಿಷ್ಣಾತ ಅಧಿಕಾರಿ ವರ್ಗದವರಿಗೆ ಉಂಟಾಗುವ ತೊಂದರೆಯನ್ನು ತಡೆಗಟ್ಟಲು ಸರ್ಕಾರದವರು ಸೂಕ್ತ ಕ್ರಮ ಕೈಗೊಳ್ಳುವರೇ ?

ಶ್ರೀ ಎಂ. ರಘುಪತಿ (ಶಿಕ್ಷಣ ಸಚಿವರು).—

ಅ) ತಾಂತ್ರಿಕ ಶಿಕ್ಷಣ ಇಲಾಖೆ

———————

ಆ) ವಿವರಗಳನ್ನು ಲಗತ್ತಿಸಿರುವ ಪಟ್ಟಿಯಲ್ಲಿ ನಮೂದಿಸಲಾಗಿದೆ.

ಆ) ವಿವರಗಳನ್ನು ಲಗತ್ತಿಸಿರುವ ಪಟ್ಟಿಯಲ್ಲಿ ನಮೂದಿಸಲಾಗಿದೆ.

ಇ) ಆಡಳಿತದ ಹಿತದೃಷ್ಟಿಯಿಂದ ವರ್ಗಾವಣೆ ಮಾಡಲಾಗಿದೆ. ನಿಷ್ಣಾತ ಅಧಿಕಾರ ವರ್ಗದವರಿಗೆ ತೊಂದರೆಯುಂಟಾಗುವ ಸಂದರ್ಭ ಉದ್ಭವಿಸಿಲ್ಲ. ಅಧಿಕಾರಿಗಳ ವಿನಂತಿಯಂತೆ ವರ್ಗಾವಣೆ ಮಾಡಿದ್ದು ಅವರ ಹಿತಕ್ಕೋಸ್ಕರ ಮತ್ತು ಅನುಕೂಲವಾಗಲೆಂದು.

ವಿಧಾನ ಸಭೆ ಪ್ರಶ್ನೆ ಸಂಖ್ಯೆ ೧೦೬೮ ಬಗ್ಗೆ

ಒಂದೇ ಸ್ಥಳದಲ್ಲಿ ಎರಡು ವರ್ಷಗಳಿಗೂ ಕಡಿಮೆ ಅವಧಿಯವರೆಗೆ ಸೇವೆ ಸಲ್ಲಿಸಿದ್ದ ಅಧಿಕಾರಿಗಳು ಮತ್ತು ನೌಕರರನ್ನು ವರ್ಗಾವಣೆ ಮಾಡಿರುವುದರ ಬಗ್ಗೆ ವಿವರಗಳು.

ಕ್ರಮ ಸಂಖ್ಯೆ	ಹೆಸರು	ಹುದ್ದೆ	ಕಾರ್ಯನಿರ್ವಹಿಸುತ್ತಿರುವ ಸಂಸ್ಥೆ ಮತ್ತು ಸ್ಥಳ ಮತ್ತು ಯಾವ ದಿನಾಂಕದಿಂದ	ಯಾವ ಸಂಸ್ಥೆ ಮತ್ತು ಸ್ಥಳಕ್ಕೆ ವರ್ಗಾಹಿಸಲಾಗಿದೆ (ಕಾರ್ಯ ವರದಿ ದಿನಾಂಕ)	ಷರಾ
	ಶ್ರೀಯುತ				
೧	ವಿ. ಚಿಕ್ಕಣ್ಣೇಗೌಡ	ಪ್ರಾಚಾರ್ಯರು	ಶ್ರೀಮತಿ ಎಲ್.ವಿ. (ಸರ್ಕಾರಿ ಪಾಲಿಟೆಕ್ನಿಕ್ ಹಾಸನ (೮-೯-೮೫)	ಸರ್ಕಾರಿ ಪಾಲಿಟೆಕ್ನಿಕ್ ಚಾಮರಾಜನಗರ ಮೈಸೂರು ಜಿಲ್ಲೆ (೧೯-೧೧-೮೪)	ಚಾಮರಾಜನಗರದಲ್ಲಿ ೯೪ಳಿ-೮೫ನೇ ಸಾಲಿನಲ್ಲಿ ಹೊಸ ಸರ್ಕಾರಿ ಪಾಲಿಟೆಕ್ನಿಕ್‌ನ್ನು ಪ್ರಾರಂಭಿಸ ಬೇಕಾಗಿದ್ದರಿಂದ ಅನುಭವೀ ಪ್ರಾಚಾರ್ಯರನ್ನು ಅಲ್ಲಿಗೆ ವರ್ಗಾಹಿಸಲಾಗಿದೆ.
೨	ಬಿ.ಕೆ. ನಂಜಪ್ಪ	ಮೆಕ್ಯಾನಿಕಲ್ ವಿಭಾಗದ ಮುಖ್ಯಸ್ಥರು.	ಶ್ರೀಮತಿ ಎಲ್ ವಿ. (ಸರ್ಕಾರಿ) ಪಾಲಿಟೆಕ್ನಿಕ್ ಹಾಸನ (೧೬-೨-೮೫)	ಸರ್ಕಾರಿ ಪಾಲಿಟೆಕ್ನಿಕ್ ಚನ್ನಪಟ್ಟಣ (೧೬-೪-೮೫)	ಸರ್ಕಾರದ ಆದೇಶದ ಮೇರೆಗೆ ವರ್ಗಾಯಿಸಲಾಗಿದೆ. ಅವರ ವಿನಂತಿಯ ಮೇರೆಗೆ
೩	ಎಸ್.ವಿ. ರಾಮಕೃಷ್ಣರೆಡ್ಡಿ	ಮೆಕ್ಯಾನಿಕಲ್ ವಿಭಾಗದ ಮುಖ್ಯಸ್ಥರು	ಸರ್ಕಾರಿ ಪಾಲಿಟೆಕ್ನಿಕ್ ಚನ್ನಪಟ್ಟಣ (೨೧-೧೦-೮೫)	ಶ್ರೀಮತಿ ಎಲ್. ವಿ. (ಸರ್ಕಾರಿ) ಪಾಲಿಟೆಕ್ನಿಕ್ ಹಾಸನ (ಇನ್ನೂ ವರದಿ ಮಾಡಿಲ್ಲ)	ಸರ್ಕಾರದ ಆದೇಶದ ಮೇರೆಗೆ ವರ್ಗಾಯಿಸಲಾಗಿದೆ ಸಾರ್ವಜನಿಕ ಹಿತದೃಷ್ಟಿಯಿಂದ

೪	ಎಂ. ಭಾಸ್ಕರ ಕಾಮತ್	ಸಿವಿಲ್ ಇಂಜಿನಿಯರಿಂಗ್ ವಿಭಾಗದ ಮುಖ್ಯಸ್ಥರು	ಸರ್ಕಾರಿ ಪಾಲಿಟೆಕ್ನಿಕ್ ಬೀದರ್, (೨೧–೧೦–೮೩)	ಸರ್ಕಾರಿ ಪಾಲಿಟೆಕ್ನಿಕ್, ಕಾರವಾರ (೩೦–೪–೮೪)	ಅಧಿಕಾರಿಯ ವಿನಂತಿಯ ಮೇರೆಗೆ ವರ್ಗಾಯಿಸಲಾಗಿದೆ
೫	ಎಂ. ಕೃಷ್ಣಮೂರ್ತಿ	ರಿಜಿಸ್ಟ್ರಾರ್	ಸರ್ಕಾರಿ ಪಾಲಿಟೆಕ್ನಿಕ್ ಭದ್ರಾವತಿ, (೧೮–೪–೮೪)	ನಿರ್ದೇಶನಾಲಯ, ಬೆಂಗಳೂರು, (೬–೮–೮೪)	ಡಿಟೋ
೬	ಬಿ. ಸಿದ್ದಯ್ಯ	ರಿಜಿಸ್ಟ್ರಾರ್	ಡಿ.ಎ.ಸಿ.ಜಿ. ಸರ್ಕಾರಿ ಪಾಲಿಟೆಕ್ನಿಕ್ ಚಿಕ್ಕಮಗಳೂರು (೨೬–೧೨–೮೩)	ಸರ್ಕಾರಿ ಪಾಲಿಟೆಕ್ನಿಕ್, ಚನ್ನಪಟ್ಟಣ (೧೮–೨–೮೫)	ಡಿಟೋ

ಉಪನ್ಯಾಸಕರ ಆವಧಿ ಪೂರ್ವ ವರ್ಗಾವಣೆಗಳನ್ನು ಮಾಡಿರುವುದಿಲ್ಲ

ಟಿಪ್ಪಣಿ.—ಮೇಲೆ ನಮೂದಿಸಿರುವ ಪ್ರತಿ ವಿಷಯದಲ್ಲೂ ಸರ್ಕಾರದ ಅನುಮತಿ ಪಡೆದು ವರ್ಗಾವಣೆ ಮಾಡಲಾಗಿದೆ.

ಶ್ರೀ ಜಿ ಎಂ. ಕಾನಡೆ,—ಮಾನ್ಯ ಅಧ್ಯಕ್ಷರೇ. ಶ್ರೀ ನಂಜುಂಡಪ್ಪ ಎಂಬುವವರನ್ನು ತಾ ೧೬-೨-೧೯೮೫ರಂದು ವರ್ಗ ಮಾಡಲಾಗಿತ್ತು. ಆದರೆ ಕೇವಲ ಎರಡು ತಿಂಗಳಲ್ಲಿಯೇ ಪುನಃ ಅವರನ್ನು ವರ್ಗ ಮಾಡಲಾಗಿದೆ. ಎಂದರೆ ಅವರ ಮೇಲೆ ಏನಾದರೂ ಅಲಿಗೇಷನ್‌ಗಳು ಇತ್ತೇ ?

ಶ್ರೀ ಎಂ ರಘುಪತಿ.—ಅಲಿಗೇಷನ್‌ಗಳು ಇದ್ದರೆ ಸಸ್ಪೆಂಡ್ ಮಾಡುತ್ತೇವೆ. ಆಡಳಿತ ದೃಷ್ಟಿಯಿಂದ ಕೆಲವು ಸಲ ಅವಧಿಗೆ ಮುಂಚೆಯೇ ವರ್ಗ ಮಾಡಬೇಕಾಗುತ್ತದೆ. ಅದರಂತೆ ಈ ಕೇಸಿನಲ್ಲಿಯೂ ಸಹ ಮಾಡಿದ್ದಾರೆ.

ಶ್ರೀ ಜಿ. ಎಂ. ಕಾನಡೆ.—ಮಾನ್ಯ ಅಧ್ಯಕ್ಷರೇ, ಶ್ರೀ ಎಸ್. ಜಿ. ರಾಮಕೃಷ್ಣ ರೆಡ್ಡಿ ಎಂಬುವರನ್ನು ಮೂರು ವರ್ಷಗಳಲ್ಲಿ ನಾಲ್ಕು ಸಲ ವರ್ಗ ಮಾಡಲು ಕಾರಣವೇನು ? ಅವರ ಮೇಲೆ ಅಲಿಗೇಷನ್‌ಗಳು ಏನಾದರೂ ಇದ್ದವೇ ?

ಶ್ರೀ ಎಂ. ರಘುಪತಿ,—ವರ್ಗ ಮಾಡಲು ಅಲಿಗೇಷನ್‌ಗಳು ಇರಬೇಕು ಎಂದೇನೂ ಇಲ್ಲ. ಅಲಿಗೇಷನ್‌ಗಳು ಇದ್ದರೆ ಸಸ್ಪೆಂಡ್ ಮಾಡುತ್ತೇವೆ. ಒಂದೊಂದು ಸಲ ಆಡಳಿತ ದೃಷ್ಟಿಯಿಂದ ಇವರುಗಳನ್ನು ವರ್ಗ ಮಾಡುತ್ತೇವೆ, ಮತ್ತೆ ಕೆಲವು ಸಲ ಬೇರೆಯವರ ಕೋರಿಕೆಯ ಮೇಲೆ ಸಹ ವರ್ಗಗಳು ಆಗುತ್ತವೆ.

ಶ್ರೀ ಜಿ ಎಂ. ಕಾನಡೆ.—ನಾವೇನಾದರೂ ಹೇಳಿದರೆ ಸರ್ಪಗಟ್ಟಲೆಯಾದರೂ ವರ್ಗ ಮಾಡುವುದಿಲ್ಲ. ಆದರೆ ಈ ಕೇಸ್‌ನಲ್ಲಿ ಕೇವಲ ಎರಡೇ ತಿಂಗಳಲ್ಲಿ ವರ್ಗ ಮಾಡಿದ್ದಾರೆ. ಇದಕ್ಕೆ ಕಾರಣವೇನು ?

ಶ್ರೀ ಎಂ. ರಘುಪತಿ.—ಆಡಳಿತದ ಹಿತದೃಷ್ಟಿಯಿಂದ ವರ್ಗ ಮಾಡಲಾಗಿದೆ. ಇನ್ನು ಮುಂದಕ್ಕೆ ಈ ರೀತಿಯಾಗದಂತೆ ನೋಡಿಕೊಳ್ಳುತ್ತೇನೆ.

ಪಶು ಆಹಾರಕ್ಕಾಗಿ ರೈತರಿಗೆ ಸಹಾಯಧನ ನೀಡುವ ಯೋಜನೆ ಮತ್ತು ಇಂಥ ಕೆಲಸಗಳಿಗಾಗಿ ಉಪಯೋಗಿಸಿಕೊಳ್ಳಲಾದ ಸಹಕಾರಿ ಪಶು ಆಹಾರ ಸಂಘಗಳ ಸಂಖ್ಯೆ.

೧೪ ಶ್ರೀ ಕೆ. ಪೆಚ್. ಪಾಟೀಲ್.—ಈ ಕೆಳಕಂಡ ಪ್ರಶ್ನೆಗೆ ಮಾನ್ಯ ಪಶುಸಂಗೋಪನಾ ಮತ್ತು ಪಶುವೈದ್ಯ ಸೇವಾ ರಾಜ್ಯ ಸಚಿವರು ದಯವಿಟ್ಟು ಉತ್ತರಿಸುವರೆ ?

ಪಶು ಆಹಾರಕ್ಕಾಗಿ ರೈತರಿಗೆ ಸಹಾಯಧನ ನೀಡುವ ಯೋಜನೆ ಏನಾದರೂ ಇದೆಯೇ ? ಹಾಗಿದ್ದರೆ ಇಂಥ ಕೆಲಸಗಳಿಗಾಗಿ ಉಪಯೋಗಿಸಿಕೊಳ್ಳಲಾದ ಸಹಕಾರಿ ಪಶು ಆಹಾರ ಸಂಘಗಳೆಷ್ಟು ? ಅವರಿಗೆ ನೀಡಿರುವ ಸಹಾಯಧನದ ಮೊತ್ತ ಎಷ್ಟು ?

ಶ್ರೀ ಸಿದ್ದರಾಮಯ್ಯ(ಪಶುಸಂಗೋಪನಾ ಮತ್ತು ಪಶುವೈದ್ಯಸೇವಾ ರಾಜ್ಯ ಸಚಿವರು).—

ಪಶು ಸಂಗೋಪನಾ ಇಲಾಖೆಯಿಂದ ಸಹಕಾರಿ ಪಶು ಆಹಾರ ಸಂಘಗಳಿಗೆ ನೇರವಾಗಿ ಸಹಾಯಧನವನ್ನು ಕೊಡುತ್ತಿಲ್ಲ. ಆದರೂ, ವಿಶೇಷ ಜಾನುವಾರು ಕಾರ್ಯಕ್ರಮದಡಿಯಲ್ಲಿ ಜಿಲ್ಲಾ ಗ್ರಾಮೀಣ ಅಭಿವೃದ್ಧಿ ಸಂಘಗಳ ಪತಿಯಿಂದ ಕಾರ್ಯನಿರ್ವಹಿಸುತ್ತಿರುವ ೬ ಜಿಲ್ಲೆಗಳಾದ ಬೆಂಗಳೂರು, ತುಮಕೂರು, ಕೋಲಾರ, ಮಂಡ್ಯ, ಹಾಸನ ಮತ್ತು ಮೈಸೂರು, ಇವುಗಳಲ್ಲಿ ೪ ರಿಂದ ೩೨ ತಿಂಗಳಿನ ವಿಶ್ರ ತಳಿ ಹೆಣ್ಣು ಕರುಗಳಿಗೆ ಪಶು ಆಹಾರವನ್ನು ಖರೀದಿಸುವ ಸಣ್ಣ ರೈತರು, ಅತಿ ಸಣ್ಣ ರೈತರು ಮತ್ತು ಕೃಷಿಕಾರ್ಮಿಕರು. ಈ ಕೆಳಕಂಡ ದರದಲ್ಲಿ ಸಹಾಯಧನವನ್ನು ಪಡೆಯಲು ಅರ್ಹರಾಗಿರುತ್ತಾರೆ.

೧) ಸಣ್ಣ ಮತ್ತು ಅತಿ ಸಣ್ಣ ರೈತರುಗಳಿಗಾಗಿ, ಶೇ ೫೦.

೨) ಕೃಷಿ ಕಾರ್ಮಿಕರುಗಳಿಗಾಗಿ. ಶೇ ೬೬೨/೩

ಸಹಾಯಧನವನ್ನು ಪಡೆಯಲು ಅರ್ಹರಾಗಿರುವ ಸಹಾಯಾರ್ಥಿಗಳು ಪಶು ಆಹಾರವನ್ನು ಹಾಲು ಉತ್ಪಾದಕರ ಸಹಕಾರ ಸಂಘಗಳು, ರೈತ ಸೇವಾ ಸಹಕಾರಿ ಸಂಘಗಳು ಮತ್ತು ಇತರೆ ಸಂಸ್ಥೆಗಳಿಂದ ಖರೀದಿಸುತ್ತಾರೆ.